ಸರಿಪಡಿಸಲಾಗದ ಇಷ್ಟೆಲ್ಲ ಸಮಸ್ಯೆಗಳಿದ್ದರೂ, ನೂರಾರು ಸವಾಲುಗಳು ನಮ್ಮ ಮುಂದಿದ್ದರೂ ಇದು ಹಲವಾರು ಪ್ರಯೋಗಗಳಿಗೆ, ಸಂಶೋಧನೆಗಳಿಗೆ ಎಡೆ ಮಾಡಿಕೊಟ್ಟಿದೆ. ಏರುತ್ತಿರುವ ವೇತನದ ಮೊತ್ತ, ನಗರಗಳಲ್ಲಿ ಖಾಸಗಿ ಕಂಪೆನಿಗಳಲ್ಲಿ ಉದ್ಯೋಗಾವಕಾಶಗಳ ಹೆಚ್ಚಳದಿಂದ ಕೈಯಲ್ಲಿ ಕಾಸು ಓಡಾಡುತ್ತಿರುವವರ ಸಂಖ್ಯೆಯೂ ಹೆಚ್ಚಾಗಿದೆ. ಜನರ ಜೀವನ ಮಟ್ಟ ಹೆಚ್ಚಿದೆ. ಮಧ್ಯಮ ವರ್ಗದವರು ಕಟ್ಟಿಕೊಂಡ ಕನಸುಗಳೂ, ಅವುಗಳನ್ನು ನನಸು ಮಾಡಿಕೊಳ್ಳುವ ನಿಟ್ಟಿನಲ್ಲಿ ಅವರು ಮಾಡುತ್ತಿರುವ ಪ್ರಯತ್ನಗಳೂ ಜಾಸ್ತಿಯಾಗಿವೆ. ಅಂಥವರು ಖಾಸಗಿ ಆಸ್ಪತ್ರೆಗಳ ಸೇವೆಯನ್ನು ನೆಚ್ಚಿಕೊಳ್ಳುತ್ತಿದ್ದಾರೆ. ಅಂತರರಾಷ್ಟ್ರೀಯ ಮಟ್ಟದ ಆರೋಗ್ಯ ಸೇವೆಯೂ ಕೈಗೆಟುಕುತ್ತಿದೆ.

## ಸ್ಮಾರ್ಟ್ ಸಾಧನಗಳು

ಮನೆ ಬಳಕೆಯ ವೈದ್ಯಕೀಯ ಹಾಗೂ ಕ್ಷೇಮ (ವೆಲ್‌ನೆಸ್)ವಾಗಿರಲು ಬಳಸುವ ಸಾಧನಗಳ ಬೇಡಿಕೆ ಯಾಕೆ ಹೀಗೆ ಅಸಾಮಾನ್ಯ ವೇಗದಲ್ಲಿ ಹೆಚ್ಚಾಗುತ್ತಿದೆ ಎಂಬುದಕ್ಕೆ ಇನ್ನೊಂದು ಕಾರಣವೂ ಇದೆ. ಅದು ಅಂತರ್‌ಜಾಲದ ಬಳಕೆ. ಈಗ ಪ್ರತಿಯೊಬ್ಬರ ಕೈಯಲ್ಲೂ ಸ್ಮಾರ್ಟ್‌ಫೋನ್ ಲಕಲಕಿಸುತ್ತಿದೆ. ವಾಹನಗಳು ತಲುಪಲಾರದ ಭಾರತದ ಮೂಲೆ ಮೂಲೆಯ ಹಳ್ಳಿಗಳಲ್ಲೂ ಅಂತರ್‌ಜಾಲದ ಸಂಕೇತಗಳು ಲಭಿಸುತ್ತಿವೆ. ಬೆರಳಾಡಿಸಿದರೆ ಸಾಕು, ಮಾಹಿತಿಗಳ ಮಹಾಪೂರವೇ ಹರಿದು ಬರುತ್ತಿದೆ. ಜೊತೆಗೆ ಮಾಧ್ಯಮಗಳಲ್ಲಿ ಆರೋಗ್ಯ ಸಂಬಂಧಿ ಲೇಖನಗಳು, ಕಾರ್ಯಕ್ರಮಗಳು ಹೆಚ್ಚಿನ ಪ್ರಮಾಣದಲ್ಲಿ ಬರುತ್ತಿವೆ. ಇದಲ್ಲದೇ ಭಾರತವೂ ಸೇರಿದಂತೆ ಜಗತ್ತಿನಾದ್ಯಂತ ಹೆಚ್ಚು ಹೆಚ್ಚು ವರ್ಷಗಳ ಕಾಲ ಬಾಳಿ, ಏನೇನು ಹೊಸ ಆವಿಷ್ಕಾರಗಳು ಕೈಗೆಟುಕುತ್ತವೆಯೋ ಅದನ್ನೆಲ್ಲ ಅನುಭವಿಸಬೇಕು ಎಂಬ ಹಂಬಲ ಜನರಲ್ಲಿ ಜಾಸ್ತಿಯಾಗುತ್ತಿದೆ. ಹೀಗಾಗಿಯೇ ಅಂತರ್‌ಜಾಲದಲ್ಲಿ 'ಸೂಪರ್ ಏಜಿಂಗ್' ಎಂಬ ಶಬ್ದ ಹರಿದಾಡುತ್ತಿದ್ದು, ಜನ ಅನಾರೋಗ್ಯ ಇಲ್ಲದಿದ್ದರೂ 'ವೆಲ್‌ನೆಸ್'ಗಾಗಿ ಏನೇನೋ ಸರ್ಕಸ್‌ಗಳನ್ನು ಮಾಡುತ್ತಿದ್ದಾರೆ.

ಆಸ್ಪತ್ರೆಯ ಶುಷ್ಕ, ಏಕಾಂಗಿ ವಾತಾವರಣದಲ್ಲಿ ಮಲಗುವ ಬದಲು ಮನೆಯಲ್ಲೇ ಆರಾಮವಾಗಿ ಇಂತಹ ಉಪಕರಣಗಳ ಸಹಾಯದಿಂದ ಆರೋಗ್ಯ ಕಾಪಾಡಿಕೊಳ್ಳುವ ಟ್ರೆಂಡ್ ಬೆಳೆಯುತ್ತಿದೆ. ಒಮ್ಮೆ ಆಸ್ಪತ್ರೆಗೆ ಭೇಟಿ ನೀಡಿದರೆ ಆಗುವ ಅಗಾಧ ವೆಚ್ಚವೂ ಈ

**ಆ್ಯಪಲ್ ವಾಚ್‌ನಲ್ಲಿ ಫಿಟ್‌ನೆಸ್ ಟ್ರ್ಯಾಕರ್ ಇದ್ದು ಐಒಎಸ್ ಆಪರೇಟಿಂಗ್ ವ್ಯವಸ್ಥೆಯಿಂದ ಕೆಲಸ ಮಾಡುತ್ತದೆ.**

ಬೆಳವಣಿಗೆಗೆ ಪ್ರಮುಖ ಕಾರಣ. ಸದ್ಯದ ವೈಜ್ಞಾನಿಕ ವಾತಾವರಣವೂ ಇದಕ್ಕೆ ಪೂರಕವಾಗಿದೆ ಎನ್ನಬಹುದು.

ಈ ನಿಟ್ಟಿನಲ್ಲಿ ತಂತ್ರಜ್ಞಾನವೆಂಬುದು ನಿರಂತರವಾಗಿ ಸಂಶೋಧನೆಗೆ ದಾರಿ ಮಾಡಿಕೊಟ್ಟಿದೆ. ಪ್ರತಿನಿತ್ಯದ ಆರೋಗ್ಯ ಸಮಸ್ಯೆಗಳನ್ನು ಹೇಗೆ ಪರಿಹರಿಸಬೇಕು ಎಂಬುದರತ್ತ ಯುವ ವಿಜ್ಞಾನಿಗಳು, ತಂತ್ರಜ್ಞರು ಗಮನ ಕೇಂದ್ರೀಕರಿಸಿದ್ದಾರೆ. ವೈದ್ಯರೂ ಕೂಡಾ ಹೊಸ ಟ್ರೆಂಡ್‌ಗಳತ್ತ ಒಂದು ಕಣ್ಣಿಟ್ಟಿದ್ದಾರೆ. ವಿದೇಶಗಳಲ್ಲಿ ಜನಪ್ರಿಯವಾದ ಪರಿಕರಗಳನ್ನು ನಮ್ಮ ಭಾರತಕ್ಕೆ ಹೊಂದುವಂತೆ ಮಾರ್ಪಡಿಸುವ ಕುಶಲಕರ್ಮಿಗಳೂ ನಮ್ಮಲ್ಲಿದ್ದಾರೆ.

ಉದಾಹರಣೆಗೆ ಓಡಾಡಲು ಕಾಲಿನ ಸಮಸ್ಯೆ ಇರುವವರು ಬಳಸುವ ಜೈಪುರ ಕಾಲುಗಳನ್ನೇ ತೆಗೆದುಕೊಳ್ಳಿ. ಕಡಿಮೆ ಬೆಲೆಯ, ಹಗುರವಾದ ಈ ಕೃತಕ ಕಾಲುಗಳನ್ನು ಪಿಯು (ಪಾಲಿಯುರೆಥೀನ್)ನಿಂದ ತಯಾರಿಸಲಾಗಿದ್ದು, ಭಾರತದ ವಾತಾವರಣಕ್ಕೆ ಹೊಂದುವಂಥದ್ದು. ಇದು ಸಂಪೂರ್ಣವಾಗಿ ಭಾರತದಲ್ಲೇ ತಯಾರಾದದ್ದು. ಸಮಸ್ಯೆಗಳಿಂದ ನಡೆಯುವ ಕನಸನ್ನೇ ಕಾಣದಿದ್ದ ಲಕ್ಷಾಂತರ ಮಂದಿ ಈಗ ಚಲನಶೀಲರಾಗಿರುವುದು ಇದೇ ಜೈಪುರ ಕಾಲುಗಳ ಸಹಾಯದಿಂದ.

ಹಲವಾರು ವರ್ಷಗಳಿಂದ ಈ ಕೃತಕ ಕಾಲುಗಳನ್ನು ನೋಡುತ್ತ ಬಂದಿರುವವರಿಗೆ ಇದೇನು ಮಹಾ ಎನಿಸಬಹುದು. ಆದರೆ ಕುಟುಂಬದ ಸದಸ್ಯರಿಗೋ, ಸಮೀಪದ ಬಂಧುಗಳಿಗೋ ಅಪಘಾತದಿಂದಲೋ, ಕಾಯಿಲೆಯಿಂದಲೋ ಅನಿರೀಕ್ಷಿತವಾಗಿ ಕಾಲುಗಳನ್ನು ಕತ್ತರಿಸಬೇಕಾದ ಸಂದರ್ಭದಲ್ಲಿ ಈ ಕೃತಕ ಕಾಲುಗಳ ಮಹತ್ವ ಅರಿವಿಗೆ ಬಾರದೇ ಇರಲು ಸಾಧ್ಯವಿಲ್ಲ.

## ಸ್ಮಾರ್ಟ್‌ಕೇನ್

ಸ್ಮಾರ್ಟ್ ಫೋನ್ ಜನಪ್ರಿಯವಾದ ನಂತರ ಇತ್ತೀಚಿನ ದಿನಗಳಲ್ಲಿ ಎಲ್ಲವನ್ನೂ 'ಸ್ಮಾರ್ಟ್' ಕಾನ್ಸೆಪ್ಟ್ ಆವರಿಸಿಕೊಂಡಿದೆ. ತಂತ್ರಜ್ಞರು, ವಿಜ್ಞಾನಿಗಳು ನೈಪುಣ್ಯದಿಂದ ನಿತ್ಯದ ಸಮಸ್ಯೆಗಳನ್ನು ಪರಿಹರಿಸಲು ಈ ಸ್ಮಾರ್ಟ್ ಪರಿಣಾಮಗಳನ್ನು ಎಲ್ಲದಕ್ಕೂ ಅಂಟಿಸುತ್ತಿದ್ದಾರೆ.

